**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.512/2024**

| | | |
|---|---|---|
| ಸಾಕ್ಷಿದಾರರ ಹೆಸರು | : ವಾಲ್ಟರ್ ಸಾಲ್ಡಾನ | ಪ್ರಾಸಾ -1 |
| ತಂದೆಯ ಹೆಸರು | : ಮಿಂಗಲ್ ಸಾಲ್ಡಾನ | ಚಾಸಾ-1 |
| ವಯಸ್ಸು | : 54 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವ್ಯವಸಾಯ | ದಿನಾಂಕಃ05.12.2024 |
| ವಾಸಸ್ಥಳ | : ಕಾರ್ಮಕ್ಕಿ, ಬಿದರಹಳ್ಳಿ | |

**:ಮುಖ್ಯ ವಿಚಾರಣೆ ಪ್ರಾಜ್ಞಾ ಸ.ಸ.ಅ. ರವರಿಂದ:**

ದಿ.18.06.2023 ರಂದು ಭಾನುವಾರ ಬೆ.9.15 ರ ಸಮಯಕ್ಕೆ ನಾನು ಮತ್ತು ಚಾಸಾ-4 ಮತ್ತು 5 ರವರು ಮೂಡಿಗೆರೆ ಚರ್ಚ್ ಗೆಂದು ನಮ್ಮ ಮನೆಯಿಂದ KA-19-MH-3039 ನ್ಯಾನೋ ಕಾರಿನಲ್ಲಿ ಹೊರಟಿದ್ದೆವು. ನಾನು ರಸ್ತೆಯ ಎಡಭಾಗದಲ್ಲಿ ಹೋಗುತ್ತಿರುವಾಗ ಮೂಡಿಗೆರೆ ಕಡೆಯಿಂದ ಬಂದ ಮಾರುತಿ ಸಿಯಾಜ್ ಸಿಲ್ವರ್ ಕಲ್ಲರ್ ಕಾರಿನ ನೋ.ಸಂ.KA-04-AA-7012 ಕಾರನ್ನು ಅತೀವೇಗ, ಅಜಾಗರುಕತೆ ಮತ್ತು ನಿಲರ್ಕ್ಷ್ಯತನದಿಂದ ಚಲಾಯಿಸಿಕೊಂಡು ರಸ್ತೆಯ ಬಲಭಾಗಕ್ಕೆ ಬಂದು ನಾನು ಚಲಾಯಿಸುತಿದ್ದ ಕಾರಿಗೆ ಡಿಕ್ಕಿ ಪಡಿಸಿದರು. ನನ್ನ ಕಾರು ಜಖಂ ಗೊಂಡು ನನಗೆ, ಚಾಸಾ-4 ಮತ್ತು 5 ರವರಿಗೆ ಗಾಯಗಳಾಗಿದ್ದು, ಸ್ಥಳೀಯರು ಮತ್ತು ನನ್ನ ಅಣ್ಣ ಚಾಸಾ-8 ರವರು ಆಂಬುಲೆನ್ಸ್ ನಲ್ಲಿ ನಮ್ಮನ್ನು ಮೂಡಿಗೆರೆ ಆಸ್ಪತ್ರೆಗೆ ಕಳುಹಿಸಿರುತ್ತಾರೆ.

ನನ್ನ ತಾಯಿಯ ತಲೆ, ಕೈ ಮತ್ತು ಮೂಗಿಗೆ ಏಟಾಗಿ ಕಿವಿಯಲ್ಲಿ ರಕ್ತ ಬರುತ್ತಿತ್ತು ಎಂದು ನನಗೆ ತಿಳಿಯಿತು. ಚಾಸಾ-5 ರವರ ಸೊಂಟ, ತಲೆ, ಹಲ್ಲು ಮತ್ತು ಕೈಗೆ ತೀವ್ರ ಗಾಯವಾಗಿದೆ ಎಂದು ಸಹಾ ನನಗೆ ತಿಳಿಯಿತು. ನನಗೆ ಕೈಕಾಲು ಅಲ್ಲಾಡಿಸಲು ಆಗುತ್ತಿರಲಿಲ್ಲ. ನಂತರ ನಮ್ಮನ್ನು ಹೆಚ್ಚಿನ ಚಿಕಿತ್ಸೆಗಾಗಿ ದೇರಳಕಟ್ಟೆಯ ಕೆ.ಎಸ್.ಹೆಗಡೆ ಆಸ್ಪತ್ರೆಗೆ ಕಳುಹಿಸಿದರು. ಅಲ್ಲಿ ನಾನು 11 ದಿನ ಇದ್ದೆ. ಆ 11 ದಿನಗಳಲ್ಲಿ ಯಾವ ಪೋಲಿಸರು ನಮ್ಮ ಹೇಳಿಕೆಯನ್ನು ಪಡೆಯಲು ಬರಲಿಲ್ಲ. ದಿ.29.06.2023 ರಂದು ನಾನು ಆಸ್ಪತ್ರೆಯಿಂದ ಡಿಸ್ ಚಾರ್ಜ್ ಆದೆ. ಅದಾದ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ಸಾಫೀ ಕ್ಲಿನಿಕ್ ಗೆ ದಾಖಲು ಮಾಡಿದರು. ಅಲ್ಲಿ ನಾನು ಸ್ವಲ್ಪ ಚೇತರಿಸಿಕೊಂಡೆ. ಅಪಘಾತವಾಗಿ 2 ½ ತಿಂಗಳಾದರೂ ಸಹಾ ಯಾರು ನನ್ನ ಹೇಳಿಕೆ ಪಡೆಯದ ಕಾರಣ ದಿ.05.09.2023 ರಂದು ನಾನು ನ್ಯಾಯಾಲಯಕ್ಕೆ ಖಾಸಗಿ ಫಿರ್ಯಾದು ದಾಖಲಿಸಿದೆ. ದಿ.16.09.2023 ರಂದು ನನಗೆ ಪ್ರ.ವ.ವರದಿ ನಕಲು ಸಿಕ್ಕಿತ್ತು. ಅದರಲ್ಲಿ ನನಗೆ ಅಪಘಾತಪಡಿಸಿದ್ದ ಕಾರಿನ ಸಂಖ್ಯೆ ತಪ್ಪಾಗಿರುವುದು ಕುಂಡುಬಂದಿದ್ದು ಅದನ್ನು ನಾನು ಪೋಲಿಸರಿಗೆ ಹೇಳಿದ್ದೇನೆ.

ದಿ.23.09.2023 ರಂದು ಪೋಲಿಸರು ನನ್ನನ್ನು ಕರೆದು ಮರು ಹೇಳಿಕೆ ಪಡೆದಿರುತ್ತಾರೆ. ಆ

ದಿನದಂದೇ ನನ್ನನ್ನು ಅಪಘಾತ ನಡೆದ ಸ್ಥಳಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಬೆ.11.30 ರಿಂದ 12.30 ರವರೆಗೂ ಮಹಜರ್ ಜರುಗಿಸಿ ಪೋಟೋ ತೆಗೆದಿದ್ದಾರೆ. ಆ ಸಮಯಕ್ಕೆ ಚಾಸಾ-2 ಮತ್ತು 3 ರವರು ಇದ್ದರು.

ಸಾಕ್ಷಿಯು ದಿ.05.09.2023 ರ ಖಾಸಗಿ ಪಿರ್ಯಾದು, ದಿ.23.09.2023 ರ ಸ್ಥಳ ಮಹಜರ್ ನಲ್ಲಿ ತಮ್ಮ ಸಹಿಗಳನ್ನು ಗುರುತಿಸಿ, ಎರಡು ಪೋಟೋಗಳನ್ನು ಮಹಜರ್ ಕಾಲಕ್ಕೆ ತೆಗೆದ ಬಗ್ಗೆ ಗುರುತಿಸುತ್ತಾರೆ. ಸದರಿ ದಾಖಲೆಗಳನ್ನು ಸಿಡಿ ಮತ್ತು ಪ್ರಮಾಣಪತ್ರದೊಂದಿಗೆ ನಿಪಿ-1 ರಿಂದ 6, ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ಮತ್ತು 2(ಎ) ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.